ಶ್ರೀ ಎಚ್. ಎಂ. ಚೆನ್ನಬಸಪ್ಪ :—ಸಾಧ್ಯವಾಗುವುದಿಲ್ಲ. ಡಾ್ರಫ್ಟ್ಸ್‌ಮನ್ನರುಗಳಲ್ಲಿ ಎರಡು ಭಾಗಗಳಿವೆ ಪಾಲಿಟೆಕ್ನಿಕ್‌ಗಳಲ್ಲಿ ಸರ್ಟಿಫಿಕೇಟ್ ಪಡೆದ ಡಿಪ್ಲೋಮದಾರರುಗಳು ಒಂದು ಭಾಗವಾದರೆ, ಮುಂಬೈ, ಪೂನಾ, ಮದ್ರಾಸ್, ಹೈದರಾಬಾದ್‌ಗಳಲ್ಲಿರತಕ್ಕ ಇಂಡಿಸ್ಟ್ರಿಯಲ್ ಟ್ರೈನಿಂಗ್ ಇನ್ಸ್‌ಟಿಟ್ಯೂಟ್‌ಗಳಲ್ಲಿ ಟ್ರೈನಿಂಗ್ ಪಡೆದು ಸರ್ಟಿಫಿಕೇಚ್ ಪಡೆದವರು ಮತ್ತೊಂದು ಭಾಗ. ಈ ರೀತಿ ಎರಡು ಗುಂಪಿನ ಜನರು ಏನಿದ್ದಾರೆ, ಇವರುಗಳ ಕೆಲಸಗಳು, ಕರ್ತವ್ಯಗಳು ಬೇರೆ ಬೇರೆ ಇರುವುದರಿಂದ, ಕೇಡರ್ ಆಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಸಹ ಬೇರೆ ಬೇರೆಯಾಗಿವೆ. ಆದ್ದರಿಂದ ಅವರನ್ನು ಒಂದೇ ದರ್ಜೆಗೆ ಸಮೀಕರಿಸಲಾಗುವುದಿಲ್ಲ.

BENACHI AND SANGAMESHWAR TANKS

562. SRI. G. C. PATIL (Kalghatgi).—

Will the Minister for Public Works and Electricity be pleased to state :—

when the work of Benachi and Sangameshwar tanks in Kalghatgi Taluk will be completed ?

SRI H. M. CHANNABASAPPA.—(Minister for Public Works and Electricity.—

Benachi Tank.

This work has been taken up and will be completed as early as possible

Sangameshwar Tank

This work is taken up and will be completed as early as possible.

ಶ್ರೀ ಜಿ. ಸಿ. ಪಾಟೀಲ್ :—ಈ ಕಾಮಗಾರಿಗಳನ್ನು ಆದಷ್ಟು ಬೇಗನೆ ಪೂರ್ತಿಗೊಳಿಸಲಾಗುವುದೂ ಎಂದು ಹೇಳಿದ್ದೀರಿ. ಇದೇ ರೀತಿಯ ಉತ್ತರ ಅನೇಕ ದಿವಸಗಳಿಂದ ಬರುತ್ತಿದೆಯೇ ಹೊರತು ಕೆಲಸ ಮಾತ್ರ ಆಗಿಲ್ಲ. ಆದ್ದರಿಂದ ಇನ್ನು ಎಷ್ಟು ದಿವಸ ಅಥವಾ ತಿಂಗಳುಗಳಲ್ಲಿ ಈ ಕೆಲಸವನ್ನು ಪೂರ್ತಿ ಮಾಡುತ್ತೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ :—ಬೆಣಚಿಕೆರೆಯ ಬಗ್ಗೆ ಹೇಳುವುದಾದರೆ, ಅದು ಸರ್ಕಾರದ ಹತೋಟಿಯಲ್ಲಿ ಇಲ್ಲ. ಅದು ಜೋನರ್ಸ್ ಆರ್ಗನೈಜೇಷನ್ ಹತೋಟಿಯಲ್ಲಿ ಇದೆ. ಅವರು ಹಣ ಕೊಟ್ಟು ಹಾಗೆ ಕೆಲಸವಾಗುತ್ತಿದೆ, ಆದ್ದರಿಂದ ನಿರ್ದಿಷ್ಟವಾದ ಕಾಲವನು ಪೂರ್ತಿ ಮಾಡುವ ಬಗ್ಗೆ ಸೂಚಿಸುವುದಕ್ಕಾಗುವುದಿಲ್ಲ.

ಇನ್ನು ಸಂಗಮೇಶ್ವರ ಕೆರೆಯ ಕೆಲಸ ಪೀಸ್ ವರ್ಕ್ ಮೂಲಕ ಕೆಲವು ಕಾಲ ನಡೆಯಿತು. ಈಗ ಆ ಕೆಲಸ ವಿದ್ಯುತ್‌ವೇಗದಲ್ಲಿ ಆಗಬೇಕೆಂಬ ಕಾರಣದಿಂದ ಟೆಂಡರ್ ಕರೆದಿದ್ದೇವೆ. ಆದ ಕಾರಣ ಆದಷ್ಟು ಕ್ಷೀವ್ರಗತಿಯಲ್ಲಿ ಕೆಲಸ ಮಾಡಿಸುತ್ತೇವೆ.

ಶ್ರೀ ಜಿ. ಸಿ. ಪಾಟೀಲ್ :—ಎಷ್ಟು ತಿಂಗಳಲ್ಲಿ ಮಾಡಿಸುತ್ತೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ :—ದಿವಸ, ತಿಂಗಳು ಎಲ್ಲವನ್ನು ಲೆಕ್ಕ ಹಾಕಿ ಇಷ್ಟೇ ದಿವಸಗಳಲ್ಲಿ ಮಾಡಿಸಿಕೊಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಇಷ್ಟು ಮಾತ್ರ ಭರವಸೆ ಕೊಡುತ್ತೇನೆ, ಏನೆಂದರೆ, ಈ ಕೆಲಸ ನಿಧಾನವಾಗುವುದಕ್ಕೆ ಅವಕಾಶ ಕೊಡುವುದಿಲ್ಲ ಎಂಬುದನ್ನು.

ಅಧ್ಯಕ್ಷರು : ಶೆಡ್ಯೂಲ್ಡ್ ಪ್ರಶ್ನೆಯನ್ನು ಇನ್ನೊಂದು ದಿನ ತೆಗೆದುಕೊಳ್ಳುತ್ತೇನೆ ಏಕೆಂದರೆ ಮಂತ್ರಿಗಳು ಊರಿನಲ್ಲಿ ಇಲ್ಲ.